ರಾಜಾಜಿನಗರ ಸೇತುವೆಯ ಇಕ್ಕೆಲೆಗಳಲ್ಲಿರುವ ಖಾಲಿ ನಿವೇಶನಗಳ ಬಗ್ಗೆ

೨೬೫. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಮಲ್ಲೇಶ್ವರದ ೧೭ನೇ ಕ್ರಾಸಿನಿಂದ ರಾಜಾಜಿನಗರದ ರಸ್ತೆಗೆ ಹೋಗುವ ಸೇತುವೆ ದಂಡಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಆ ಸೇತುವೆಯ ಇಕ್ಕೆಲೆಗಳಲ್ಲಿ ಖಾಲಿ ಪ್ರದೇಶ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಈ ಖಾಲಿ ಪ್ರದೇಶಗಳಲ್ಲಿ ಒಂದನ್ನು ಆಟದ ಮೈದಾನವನ್ನಾಗಿಯೂ ಇನ್ನೊಂದರಲ್ಲಿ ಜನರಲ್ ಆಸ್ಪತ್ರೆ ಕಟ್ಟಿಸಬೇಕೆಂದು ಜನ ಮತ್ತು ಶಾಸಕರು ಮನವಿ ಮಾಡಿದ್ದಾರೆಯೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ದಂಡಿ ಇಲ್ಲ.

ಆ) ಈ ಸೇತುವೆಯ ಉತ್ತರ ಮತ್ತು ದಕ್ಷಿಣಕ್ಕೆ ಖಾಲಿ ಪ್ರದೇಶವಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಹೌದು.

ಕೆ. ಆರ್. ಮಿಲ್ಸ್ ಮೈಸೂರು ಇವರಿಂದ ಕೆ. ಇ. ಬಿ.ಗೆ ಬರಬೇಕಾದ ಬಾಕಿ ಹಣದ ಬಗ್ಗೆ

೨೫೦. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಆಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರಿನಲ್ಲಿರುವ ಕೃಷ್ಣರಾಜೇಂದ್ರ ಮಿಲ್ ಆಡಳಿತ ವರ್ಗದವರಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಕೊಡಬೇಕಾದ ಬಾಕಿ ಹಣ ಎಷ್ಟು ?

ಆ) ಈ ಬಾಕಿ ಹಣವನ್ನು ವಸೂಲಿ ಮಾಡಲು ಸರಕಾರದವರು ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ ?

ಶ್ರೀ ಜೆ. ಹೆಚ್. ಪಟೇಲ್ (ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು)

ಅ) ರೂಪಾಯಿ ೩೯,೭೧,೩೧೩.೮೯ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬರಬೇಕಾಗಿದೆ.

ಆ) ಮಂಡಳಿಗೆ ಬರಬೇಕಾಗಿರುವ ಹಣವನ್ನು ವಸೂಲು ಮಾಡಲು ಸೂಕ್ತ ಕ್ರಮವನ್ನು ಕಾನೂನು ಪ್ರಕಾರ ಕೈಗೊಂಡಿದೆ.

ಮುರ್ಕಂಜ ಗ್ರಾಮದ ಸಹಕಾರಿ ಸಂಘದ ಉಪ ಶಾಖೆ ಬಗ್ಗೆ

೨೫೪. ಶ್ರೀ ಬಕೀಲಹುಕ್ರಪ್ಪ (ಸೂಳ್ಯ).–ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಹಕಾರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ.—

ಅ) ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಮುರ್ಕಂಜ ಗ್ರಾಮದ ಮಿತ್ತಡ್ಕ ಎಂಬಲ್ಲಿ ಒಂದು ಸಹಕಾರಿ ಸಂಘದ ಉಪ ಕಟ್ಟಡವನ್ನು ಕಟ್ಟಲು ೧೯೮೧ರಲ್ಲಿ ಮಂಜೂರು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಈ ಬಗ್ಗೆ ಸರ್ಕಾರದಿಂದ ೯೬,೦೦೦ ರೂಪಾಯಿ ಮಂಜೂರು ಆಗಿರುವುದು ನಿಜವೇ ?

ಇ) ಇದರಲ್ಲಿ ೨೬,೦೦೦-೦೦ ರೂ. ಸಬ್ಸಿಡಿ ಇದ್ದು ಈವರೆವಿಗೂ ಕಟ್ಟಡ ಆಗದಿರಲು ಕಾರಣವೇನು ?